# ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಮಾಯೆ

ಡಾ. ಹೆಚ್. ರಾಮಚಂದ್ರಸ್ವಾಮಿ

**ಮಾಯೆಯ ಒಂದು ನೂತನ ವಿವರಣೆಯನ್ನು ವಿವೇಕಾನಂದರ ಕೃತಿಗಳಲ್ಲಿ ನಾವು ಕಾಣುತ್ತೇವೆ. ಸಾಂಪ್ರದಾಯಿಕ ಅದ್ವೈತದ ಹಿನ್ನೆಲೆಯಲ್ಲಿ ಅದರ ವಿಶ್ಲೇಷಣಾತ್ಮಕ ಅಧ್ಯಯನವೇ ಈ ಲೇಖನದ ವಿಷಯ. ಹಲವು ಗ್ರಂಥಗಳನ್ನೂ ಹಾಗೂ ಲೇಖನಗಳನ್ನೂ ಬರೆದಿರುವ ಶ್ರೀ ರಾಮಚಂದ್ರ ಸ್ವಾಮಿಯವರು ಶೃಂಗೇರಿಯ ಜೆ.ಸಿ.ಬಿ.ಎಂ. ಕಾಲೇಜಿನ ನಿವೃತ್ತ ಪ್ರಾಧ್ಯಾಪಕರೂ ಬ್ರಿಟಿಷ್ ಇಕಾಲಾಜಿಕಲ್ ಸೊಸೈಟಿಯ ಗೌರವಸದಸ್ಯರೂ ಆಗಿರುವರು.**

ಸ್ವಾಮಿ ವಿವೇಕಾನಂದರು ಕೇವಲ ಶುಷ್ಕತಾತ್ತ್ವಿಕರಲ್ಲವೆಂದೂ ಆಧ್ಯಾತ್ಮಿಕತೆಯ ನಿಷ್ಠಾವಂತ ಅನುಯಾಯಿಗಳೆಂದೂ ಆ ಮೂಲಕವೇ ಭಾರತವನ್ನು ಬಡಿದೆಬ್ಬಿಸಿ ಖಿಲವಾಗುತ್ತಿದ್ದ ಅದರ ಆಧ್ಯಾತ್ಮ ಸಂಪತ್ತನ್ನು ಪುನರ್ನವೀಕರಿಸಿದರೆಂದೂ ನಮಗೆಲ್ಲ ಗೊತ್ತು. ಅವರು ಜ್ಞಾನದ ಹಾಗೂ ಕರ್ಮದ ಅದ್ಭುತ ಸಮನ್ವಯ ಕಾರರಾಗಿದ್ದರು. ಈ ದ್ವಂದ್ವಮಯ ಬದುಕು ಅವರನ್ನು ನಿರಾಶರನ್ನಾಗಿ ಮಾಡಲಿಲ್ಲ; ಬದಲಿಗೆ ವರ್ತಮಾನದಲ್ಲಿ ಬದುಕಿ ಅಸಕ್ತಭಾವದಲ್ಲಿ ಕರ್ತವ್ಯಗಳನ್ನು ನಿರ್ವಹಿಸುವ ಅಚ್ಚರಿಯ ಕರ್ಮ ಯೋಗಿಯನ್ನಾಗಿಸಿತು; ಆ ಮೂಲಕ ಆದರ್ಶದ ಹಾಗೂ ವಾಸ್ತವಿಕತೆಯ ದಿವ್ಯಸಮನ್ವಯವನ್ನು ಅವರು ಸಾಧಿಸಿದರು. ವೈಯಕ್ತಿಕ ಮುಕ್ತಿಯ ಕಲ್ಪನೆಯ ವಿರೋಧವಾಗಿಯೇ ಅವರ ನಿಲುವು; ಸಾರ್ವಜನಿಕ ಸಾರೋದ್ಧಾರ, ಇಡೀ ದೇಶದ ಆಧ್ಯಾತ್ಮಿಕ ಶಕ್ತಿಯ ಪುನರ್ನಿರ್ಮಾಣದ ಕಡೆಗೇ ಅವರ ಒಲವು.

> **ಒಂದು ವಸ್ತು ತನ್ನಲ್ಲಿ ಯಾವ ಬದಲಾವಣೆ ಇಲ್ಲದೆ ಇನ್ನೊಂದು ವಸ್ತುವಾಗಿ ಕಂಡರೆ, ಹಾಗೆ ಕಾಣತಕ್ಕ ವಸ್ತುವನ್ನು ಮಿಥ್ಯಾ ಎನ್ನಬಹುದು.**

## ಸಾಂಪ್ರದಾಯಿಕ ಅದ್ವೈತದೃಷ್ಟಿ

ಅದ್ವೈತ ವೇದಾಂತದಲ್ಲಿ ಮಾಯೆಯ ಕಲ್ಪನೆಗೆ ಬಹು ಮುಖ್ಯ ಸ್ಥಾನವಿದೆ. ದೇಶ ಕಾಲ ವಸ್ತುಗಳ ಪರಿಮಿತಿಗೆ ಒಳಪಡದ, ಅನಂತವೂ ಅಬಾಧಿತವೂ ಆದ ಸತ್ಯವು ಬ್ರಹ್ಮ ಒಂದೇ ಎಂಬುದು ಅದ್ವೈತ ಸಿದ್ಧಾಂತ. ಹಾಗಾದರೆ ಈ ಜಗತ್ತು ಎಂಬುದು ಏನು? ಬ್ರಹ್ಮವೇ ಜಗತ್ತಾಗಿದೆ ಎಂದರೆ ಅದು ಅಬಾಧಿತವಾಗಿ ಉಳಿಯದು; ಬ್ರಹ್ಮದಿಂದ ಜಗತ್ತು ಬೇರೆ ಎಂದರೆ ಅದರ ಅನಂತತ್ವಕ್ಕೆ ಭಂಗ ಬರುವುದು. ಬ್ರಹ್ಮದಿಂದ ಭಿನ್ನವಲ್ಲ ಎಂದರೆ ಜಗತ್ತಿನಲ್ಲಿಯ ವೈವಿಧ್ಯ ತೋರುವುದು ಹೇಗೆ?

ಆದ್ದರಿಂದಲೇ ಈ ಪ್ರಪಂಚವನ್ನು ಬ್ರಹ್ಮದಿಂದ ಭಿನ್ನವೂ ಅಲ್ಲದ, ಅಭಿನ್ನವೂ ಅಲ್ಲದ ಮಿಥ್ಯಾ ಅಥವಾ ಅನಿರ್ವಚನೀಯ ಎನ್ನುತ್ತಾರೆ ಶಂಕರಾಚಾರ್ಯರು. ಒಂದು ವಸ್ತು ತನ್ನಲ್ಲಿ ಯಾವ ಬದಲಾವಣೆ ಇಲ್ಲದೆ ಇನ್ನೊಂದು ವಸ್ತುವಾಗಿ ಕಂಡರೆ, ಹಾಗೆ ಕಾಣತಕ್ಕ ವಸ್ತುವನ್ನು ಮಿಥ್ಯಾ ಎನ್ನಬಹುದು. ಮಬ್ಬುಗತ್ತಲೆಯಲ್ಲಿ ಹಗ್ಗವನ್ನು ಹಾವೆಂದು ತಿಳಿದವನ ಹೆದರಿಕೆಯ ಅನುಭವ ಸತ್ಯವಾಗಿದ್ದರೂ, ಅಲ್ಲಿರುವ ವಸ್ತು ನಿಜವಾಗಿ ಹಗ್ಗವೇ ಆಗಿರುವ ಕಾರಣ ಆ ವೈಯಕ್ತಿಕ ಅನುಭವವನ್ನು ಮಿಥ್ಯಾ ಅಥವಾ ಭ್ರಮೆ ಎನ್ನಬೇಕಾಗುತ್ತದೆ. ಈ ಭ್ರಮೆಗೆ ಕಾರಣ ಅವಿದ್ಯೆ. ಬೆಳಕು ಮುಂತಾದ ಪರಿಕರಗಳೊಡನೆ ನೋಡಿ ಆ ಭ್ರಮೆಯನ್ನು ನಿವಾರಿಸಿಕೊಳ್ಳಬಹುದು. ಹಾಗೆಯೇ ಹಗ್ಗದ ಸ್ಥಾನದಲ್ಲಿದ್ದು ಹಾವಿನ ಹಾಗೆ ಬದಲಾಗುವ ಜಗತ್ತಾಗಿ ಕಾಣಿಸುತ್ತಿರುವುದು ನಿಜವಾಗಿ ಬ್ರಹ್ಮವೇ ಎಂಬುದು ಶಂಕರಾಚಾರ್ಯರ ಸಿದ್ಧಾಂತ. ಸಾಧನೆಯ ಮೂಲಕ, ಜಗತ್ತಾಗಿ ಕಾಣಿಸುತ್ತಿದ್ದುದು ಬ್ರಹ್ಮವೇ ವಿನಃ ಬೇರೆಯಲ್ಲ ಎಂಬ ಅರಿವು ವ್ಯಕ್ತಿಗೆ ಉಂಟಾಗುತ್ತದೆ. ದೃಷ್ಟಿಂ ಜ್ಞಾನಮಯೀಂ ಕೃತ್ವಾ ಪಶ್ಯೇತ್ ಬ್ರಹ್ಮಮಯಂ ಜಗತ್— "ಜ್ಞಾನಮಯ ದೃಷ್ಟಿಯನ್ನು ಪಡೆದು ಬ್ರಹ್ಮಮಯ ಜಗತ್ತನ್ನು ನೋಡು" ಎನ್ನುತ್ತಾರೆ ಆಚಾರ್ಯರು. ಜಗತ್ತನ್ನು ಅದರ ಸತ್ಯ ಸ್ವರೂಪವಾದ ಬ್ರಹ್ಮವಾಗಿಯೇ ಕಂಡರೆ ಶಾಶ್ವತ ಆನಂದ ದೊರಕುವುದು ಎಂದು ಹೇಳಿ ಮನುಷ್ಯನನ್ನು ದೃಶ್ಯಪ್ರಪಂಚರೂಪದ ಸಂಸಾರವೆಂಬ ಭ್ರಮಾತ್ಮಕ ಮಬ್ಬುಗತ್ತಲೆಯಿಂದ ಪಾರುಮಾಡುವುದಕ್ಕಾಗಿ ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಎಂದಿರುವರೇ ಹೊರತು ಜಗತ್ತನ್ನು ಮಿಥ್ಯೆಯೆಂದು ಸಾಧಿಸುವುದೇ ಶಂಕರಾಚಾರ್ಯರ ಉದ್ದೇಶವಲ್ಲ.

ಪ್ರಪಂಚವು ಮಿಥ್ಯೆ ಎಂಬುದು ಬ್ರಹ್ಮಜ್ಞಾನಿಯ ದೃಷ್ಟಿಯಿಂದ; ವ್ಯವಹಾರದಲ್ಲಿ, ಸಾಮಾನ್ಯನ ದೃಷ್ಟಿಯಲ್ಲಿ ಅಲ್ಲ. ಅದ್ವೈತ ಎಂಬ ಮಾತೇ ವ್ಯವಹಾರದ್ದು; ಪರಮಾರ್ಥತತ್ತ್ವವು ದ್ವೈತಾದ್ವೈತ ವಿವರ್ಜಿತವಾದದ್ದು ಎಂದು ಆಚಾರ್ಯರೇ ಹೇಳಿದ್ದಾರೆ. ವ್ಯವಹಾರದಲ್ಲಿ ಕಾರ್ಯಕಾರಣಭಾವವನ್ನು ನೋಡುತ್ತಿರುವುದು ನಮ್ಮ ಅನುಭವವಾದ್ದರಿಂದ ಕಾರ್ಯವಾಗಿ ಕಾಣುತ್ತಿರುವ ಪ್ರಪಂಚಕ್ಕೆ ಕಾರಣವೊಂದನ್ನು ಹೇಳಲೇಬೇಕಾಗಿದೆ; ಬ್ರಹ್ಮವು ಕಾರಣ ಕಾಲ ದೇಶಾದಿಗಳನ್ನು ಮೀರಿದುದಾದ್ದರಿಂದ ಅದನ್ನು ಕಾರಣವಾಗಿ ಹೇಳುವ ಹಾಗಿಲ್ಲ; ಆದ್ದರಿಂದ ಬ್ರಹ್ಮದಿಂದ ಭಿನ್ನವೂ ಅಲ್ಲದ ಅಭಿನ್ನವೂ ಅಲ್ಲದ ಅನಿರ್ವಚನೀಯವಾದ ಮಾಯೆಯನ್ನು ಕಾರಣವಾಗಿ ಹೇಳಲಾಗಿದೆಯಲ್ಲದೆ, ಮಾಯೆಗೆ ಸ್ವತಂತ್ರವಾದ ಸ್ಥಾನವನ್ನು ಕೊಟ್ಟಿಲ್ಲ. ಅಜ್ಞಾನರೂಪವಾದ ಮಾಯೆಯನ್ನು ಪ್ರಮಾಣಗಳಿಂದಾಗಲಿ ಯುಕ್ತಿಯಿಂದಾಗಲಿ ತಿಳಿಯಲೆತ್ನಿಸುವುದು, ವಿವರಿಸಲೆತ್ನಿಸುವುದು ಬೆಳಕಿನ ಸಹಾಯದಿಂದ ಕತ್ತಲೆಯನ್ನು ಹುಡುಕಿದಂತೆ.

ಜೀವನ ಜೀವತ್ವ ಅಥವಾ ಸಂಸಾರವು ಮಿಥ್ಯೆಯೇ ಹೊರತು ಜೀವನೇ ಮಿಥ್ಯವಲ್ಲ. ಸತ್ಯವಾದ ಬ್ರಹ್ಮವೇ ಅಜ್ಞಾನದಿಂದಾಗಿ ಜೀವನಂತೆ ಕಾಣುತ್ತಿದ್ದಾನೆ. ಜೀವೋ ಬ್ರಹ್ಮೈವ ನಾಽಪರಃ—ಜೀವನು ಬ್ರಹ್ಮವೇ ಅಲ್ಲದೆ ಬೇರೆಯಲ್ಲ. ಆದಿ ಅಂತ್ಯಗಳಿಲ್ಲದ ಈ ಅಜ್ಞಾನದಿಂದಾಗಿ, ಭ್ರಮಾತ್ಮಕ ದೇಹಗಳೊಂದಿಗೆ ಜೊತೆಗೂಡಿ ಜೀವರೂಪವಾಗಿರುವ ಬ್ರಹ್ಮವು ಮಿತಿಗೊಳಪಟ್ಟು, ಸಾಂತವಾಗಿರುವಂತೆ ತೋರುವುದು; ಇತರ ಅಂಥವೇ ವಸ್ತುಗಳೊಂದಿಗೆ ಆಕರ್ಷಣೆ-ವಿಕರ್ಷಣೆಗೊಳಪಡುವ, ಆ ಮೂಲಕ ಸುಖದುಃಖಾದಿಗಳನ್ನು ಅನುಭವಿಸುವ ಭಾಸವಾಗುವುದು; ನಾನು ನನ್ನದು ಎಂಬ ಮಮಕಾರವನ್ನು ಪಡೆಯುವುದು. ದೇಹಮನಸ್ಸುಗಳು ನಾನೆಂಬ ಭಾವಬಂಧನವನ್ನು ಕಳೆದುಕೊಳ್ಳುವುದು ಬ್ರಹ್ಮತತ್ತ್ವದ ಶ್ರವಣ-ಮನನ-ನಿದಿಧ್ಯಾಸನಗಳಿಂದ ಸಾಧ್ಯವೇ ಹೊರತು ಯಾವುದೇ ಬಗೆಯ ಉಪಾಸನೆಗಳಿಂದಲ್ಲ. ಉಪಾಸನೆಗಳು ಮನಸ್ಸನ್ನು ಶುದ್ಧಗೊಳಿಸಿ ಬ್ರಹ್ಮಜ್ಞಾನದ ಹಂಬಲವನ್ನು ಹೆಚ್ಚಿಸಬಹುದಷ್ಟೇ. ಇಷ್ಟನ್ನು ಸಾಂಪ್ರದಾಯಿಕವಾದ ಶಾಂಕರ ಅದ್ವೈತವೆನ್ನಬಹುದು.

**ಬ್ರಹ್ಮ ಸಾಕ್ಷಾತ್ಕಾರವಾದಾಗ ಕಾಲದೇಶಕಾರಣಗಳು ಇಲ್ಲವಾಗುತ್ತವೆ—ಸಮುದ್ರದಲ್ಲಿ ಮುಳುಗಿರುವವನ ಪಾಲಿಗೆ ಮೇಲಿರುವ ಅಲೆಗಳು ಇಲ್ಲವಾಗುವಂತೆ.**

## ವಿವೇಕಾನಂದರ ದೃಷ್ಟಿಯಲ್ಲಿ ಅದ್ವೈತ

ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿಯೂ ಸಹ ಸತ್-ಚಿತ್-ಆನಂದ ಸ್ವರೂಪವಾದ ಬ್ರಹ್ಮವೊಂದೇ ಏಕಮಾತ್ರ ಸತ್ಯ. ಬ್ರಹ್ಮವನ್ನು ಉಳಿದು ಬೇರಾವುದೂ ಅಸ್ತಿತ್ವದಲ್ಲಿಯೇ ಇಲ್ಲ; ನಾಮರೂಪರಹಿತವಾದ ಈ ಬ್ರಹ್ಮವು ಕಾರಣ-ಕಾಲ-ದೇಶಗಳನ್ನೆಲ್ಲ ಮೀರಿದುದು. ಇರುವುದೆಲ್ಲ ಆ ಅನಂತ ಅಸ್ತಿತ್ವ (ಸತ್)ಒಂದೇ; ಪ್ರಕೃತಿ, ದೇವರು, ವಿಶ್ವ ಇತ್ಯಾದಿ ಇತ್ಯಾದಿಗಳೆಲ್ಲವೂ ನಾಮರೂಪಗಳನ್ನು ತಳೆದು ಬಂದಿರುವ ಅದೇ ಅಲ್ಲದೆ ಬೇರೆಯಲ್ಲ—ಎನ್ನುತ್ತಾರೆ ಅವರು. ಕಾರಣ-ಕಾಲ-ದೇಶಗಳ ಈ ಮಾಯಾ ಪರದೆಯ ಮೇಲೆ ಮೂಡಿರುವ ಬ್ರಹ್ಮದ ಪ್ರತಿಬಿಂಬವೇ ಈ ವಿಶ್ವ. ಇಂತಹ ಪ್ರತಿಬಿಂಬವೂ ನಮ್ಮ ಮನಸ್ಸಿನ ಕಲ್ಪನೆಯೇ ಹೊರತು ಬ್ರಹ್ಮದಲ್ಲಿ ಅದಕ್ಕೆ ಅಸ್ತಿತ್ವವಿಲ್ಲ. ಸಮುದ್ರದ ಮೇಲ್ಮೈ ಮೇಲೆ ಕುಣಿಯುತ್ತ ರುದ್ರತಾಂಡವವನ್ನಾಡುತ್ತ 'ಅಲೆ'ಗಳೆಂಬ ನಾಮರೂಪಗಳನ್ನು ಪಡೆಯುವ, ಆದರೆ ಸಮುದ್ರದಿಂದ ಭಿನ್ನವಾದ ಅಸ್ತಿತ್ವವಿಲ್ಲದಿರುವ ಅಲೆಗಳಂತೆ ಈ ವಿಶ್ವದ ಆಗುಹೋಗುಗಳು. ಪ್ರಪಂಚವೆನ್ನುವುದೊಂದು ಕನಸು; ಕನಸು ಕಾಣುತ್ತಿರುವವನಲ್ಲಿರುವುದು ಮಾಯೆ; ಅದನ್ನು ಕೊಡಹಿ ಎಚ್ಚರಗೊಂಡು ಮೇಲೆದ್ದವನಿಗೆ ಕನಸು ಕಡಿದು ಏಕೈಕ ಸತ್ಯ ಸಾಕ್ಷಾತ್ಕಾರವಾಗುತ್ತದೆ—ಎನ್ನುತ್ತಾರೆ.

ವಿವೇಕಾನಂದರ ದೃಷ್ಟಿಯಲ್ಲಿ ಬ್ರಹ್ಮವಸ್ತುವಿಗೆ ಸಂಬಂಧಿಸಿದಂತೆ ಈ ಪ್ರಪಂಚದ ಸ್ಥಾನವೇನು? ಅವರು "ಪರಬ್ರಹ್ಮವು ಕಾಲ-ದೇಶಗಳ, ಕಾರ್ಯಕಾರಣಗಳ ಮೂಲಕ ಪ್ರವೇಶಿಸಿ ಜಗತ್ತಾಗಿದೆ. ಇದೇ ಅದ್ವೈತದ ಮುಖ್ಯಭಾವನೆ. ಕಾಲದೇಶ ಕಾರ್ಯಕಾರಣಗಳು ಪರಬ್ರಹ್ಮವನ್ನು ನೋಡಲು ನಾವು ಬಳಸಬಹುದಾದ ಗಾಜಿನಂತೆ. ಇದರ ಮೂಲಕ ನೋಡಿದಾಗ ಪರಬ್ರಹ್ಮವು ವಿಶ್ವವಾಗಿ ಕಾಣುವುದು. ಆದ್ದರಿಂದ ಪರಬ್ರಹ್ಮದಲ್ಲಿ ಕಾಲದೇಶಕಾರಣಗಳು ಇಲ್ಲ" ಎನ್ನುತ್ತಾರೆ (ಕೃತಿಶ್ರೇಣಿ, ೨.೬೮). ಅವುಗಳ ಮೂಲಕವೇ ಈ ವಿಶ್ವದ ಎಲ್ಲವೂ ಅಭಿವ್ಯಕ್ತವಾಗಬೇಕಾಗಿರುವುದರಿಂದ ಅವುಗಳಿಗೆ ಅಸ್ತಿತ್ವವಿಲ್ಲವೆಂದೂ ಹೇಳಲಾಗದು. ಬ್ರಹ್ಮ-ಸಾಕ್ಷಾತ್ಕಾರವಾದಾಗ ಅವು ಇಲ್ಲವಾಗುತ್ತವೆ—ಸಮುದ್ರದಲ್ಲಿ ಮುಳುಗಿರುವವನ ಪಾಲಿಗೆ ಮೇಲಿರುವ ಅಲೆಗಳು ಇಲ್ಲವಾಗುವಂತೆ.

ಎಂದರೆ ಬ್ರಹ್ಮವು ಅವ್ಯಕ್ತ, ನಿರ್ಗುಣ, ನಿರ್ವಿಶೇಷ, ನಿರಪೇಕ್ಷ ಎಂದೇ ಹೇಳಿದಂತೆ ಆಯಿತು. ಈ ವಿಚಾರದಲ್ಲಿ ಸ್ವಾಮಿ ವಿವೇಕಾನಂದರ ಮತ್ತು ಸಾಂಪ್ರದಾಯಿಕ ಅದ್ವೈತ ಕಲ್ಪನೆಗಳಲ್ಲಿ ವ್ಯತ್ಯಾಸವಿಲ್ಲ. ಆದರೆ ಸ್ವಾಮಿ ವಿವೇಕಾನಂದರ ಪ್ರಕಾರ ಬ್ರಹ್ಮವನ್ನು ಹೀಗೆ ನೇತ್ಯಾತ್ಮಕವಾಗಿಯಲ್ಲದೆ ಇತ್ಯಾತ್ಮಕ ವಾಗಿಯೂ ಸಹ ನಾವು ಬಳಿಸಾರಬಹುದು. ಯಾವುದನ್ನು "ನೇತಿ, ನೇತಿ" ಎಂದು ತ್ಯಜಿಸಿದ್ದೆವೋ ಅದೇ ಹೊಸದೊಂದು ಬೆಳಕಿನಲ್ಲಿ, ಹೊಸದೊಂದು ಅರ್ಥ ತಳೆದು ಇತ್ಯಾತ್ಮಕವಾಗುತ್ತದೆ; ಎಲ್ಲವೂ ಬ್ರಹ್ಮವೇ ಆದುದರಿಂದ ಇದರಲ್ಲಿ ದೋಷವೇನೂ ಇಲ್ಲ. "ಅದನ್ನು ತಿಳಿದುಕೊಳ್ಳಬೇಕಾದರೆ ನೇತಿ ಮಾರ್ಗದಲ್ಲಿ ಹೋಗಬೇಕು. ಅನಂತರ ಇತಿ ಪ್ರಾರಂಭವಾಗುವುದು. ಅಜ್ಞಾನವನ್ನು ಮತ್ತು ಅಸತ್ಯವನ್ನು ನಾವು ತ್ಯಜಿಸಬೇಕು; ಅನಂತರ ಸತ್ಯವು ತಾನೇ ವ್ಯಕ್ತವಾಗಲು ಪ್ರಾರಂಭವಾಗುವುದು. ಸತ್ಯವನ್ನು ಗ್ರಹಿಸಿದ ಮೇಲೆ ಮೊದಲು ನಾವು ತ್ಯಜಿಸಿದ್ದ ವಸ್ತುವು ಬೇರೆಯೇ ಆಗಿ ಕಾಣುವುದು; ದೈವೀಸ್ವರೂಪವನ್ನು ತಾಳುವುದು." (ಕೃತಿಶ್ರೇಣಿ, ೨:೧೦೧-೧೦೨). ಎಂದರೆ ಶಾಂಕರ ಅದ್ವೈತದಲ್ಲಿಯ ಹಾಗೆ ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಎನ್ನಬೇಕಾಗಿಲ್ಲ; ದೈವೀ ಸೃಷ್ಟಿಯಲ್ಲಿ ವಸ್ತುವೈವಿಧ್ಯಮಯ ಪ್ರಪಂಚವೂ ಸಹ ಸತ್ಯವೇ—ಇದು ಅದ್ವೈತಕ್ಕೆ ಸ್ವಾಮಿ ವಿವೇಕಾನಂದರ ಕೊಡುಗೆ.

ವಿವೇಕಾನಂದರ ಪ್ರಕಾರ, ಅದ್ವೈತವು ಬ್ರಹ್ಮೈವ ಸತ್ಯಂ ಎಂದಾಕ್ಷಣ ನಾವು ಪ್ರಪಂಚವನ್ನು ಕಳೆದುಕೊಳ್ಳುವುದಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಹೊರಡಬೇಕೆಂದೇನೂ ಇಲ್ಲ. ಎಲ್ಲವೂ ಬ್ರಹ್ಮಮಯವೆಂದಾದ ಮೇಲೆ ಎಲ್ಲವನ್ನೂ ದೈವೀಸ್ವರೂಪವನ್ನಾಗಿ ನೋಡುವುದಕ್ಕೇನು ಅಡ್ಡಿ? ನಾವು ಮಾಡಬೇಕಾದ ಸಾಧನೆ ಇದೇ—ಸಮಸ್ತ ಜಗತ್ತನ್ನೂ ಬ್ರಹ್ಮಮಯವಾಗಿ "ಕಾಣು"ವುದು. ಈಶಾವಾಸ್ಯಮಿದಂ ಸರ್ವಂ ಎಂದೇ ಪ್ರಾರಂಭವಾಗುತ್ತದೆ ಪುರಾತನವಾದ ಈಶೋಪನಿಷತ್ತು. "ನೀವು ನಿಮ್ಮ ಪತ್ನಿಯೊಂದಿಗೆ ಇರಬಹುದು. ಅವಳನ್ನು ತ್ಯಜಿಸಬೇಕೆಂದು ಅರ್ಥವಲ್ಲ; ಅವಳಲ್ಲಿ ನೀವು ದೇವರನ್ನು ಕಾಣಬೇಕು." ಅಂತೆಯೇ, ನೀವು "ಮಕ್ಕಳಲ್ಲಿ ದೇವರನ್ನು ಕಾಣಬೇಕು, ಎಲ್ಲದರಲ್ಲಿಯೂ ದೇವರನ್ನು ಕಾಣಬೇಕು. ಜನನ ಮರಣಗಳಲ್ಲಿ, ಸುಖದುಃಖಗಳಲ್ಲಿ, ಭಗವಂತನು ಒಂದೇ ಸಮ

ನಾಗಿರುವನು. ಇಡಿಯ ಪ್ರಪಂಚವೇ ಅವನಿಂದ ತುಂಬಿ ತುಳುಕುತ್ತಿರುವುದು. ಕಣ್ತೆರೆದು ಅವನನ್ನು ನೋಡಿ. ಇದನ್ನೇ ವೇದಾಂತವು ಬೋಧಿಸುವುದು" (ಕೃತಿಶ್ರೇಣಿ, ೨: ೮೨).

> ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಮಾಯೆಯು ಭ್ರಮೆಯಲ್ಲ, ಸಿದ್ಧಾಂತವೂ ಅಲ್ಲ, ಬದಲಿಗೆ ಪ್ರಪಂಚದಲ್ಲಿ ನಾವು ನೋಡಿ ಅನುಭವಪಡುವ ವಾಸ್ತವ.

ಬ್ರಹ್ಮಮಯವಾದ ಈ ಪ್ರಪಂಚವು ಸತ್ಯವೆಂದಾದರೆ, ಈ ಪ್ರಪಂಚದಲ್ಲಿ ಹೇಗೆ ಬದುಕಿರಬೇಕು, ಹೇಗೆ ಕೆಲಸ ಮಾಡಬೇಕು? ವಿವೇಕಾನಂದರೆನ್ನುತ್ತಾರೆ, "ನೂರು ವರ್ಷಗಳವರೆಗೆ ಬೇಕಾದರೆ ಜೀವಿಸಿ; ಪ್ರಪಂಚದ ಸುಖಭೋಗಗಳನ್ನು ಬೇಕಾದರೆ ಪಡೆಯಿರಿ. ಆದರೆ ಎಲ್ಲವನ್ನೂ ದೈವೀಸ್ವರೂಪಕ್ಕೆ ತನ್ನಿ, ಪಾವನಮಾಡಿ. ಇನ್ನೊಬ್ಬರಿಗೆ ಉಪಯೋಗವಾಗುವಂತಹ ದೀರ್ಘಜೀವನವನ್ನು, ಆನಂದದಿಂದ ಮತ್ತು ಕರ್ಮನಿಷ್ಠೆಯಿಂದ ಕೂಡಿದ ಜೀವನವನ್ನು ಬದುಕಲು ಹಂಬಲಿಸಿ. ಹೀಗೆ ಕರ್ಮನಿರತರಾದರೆ ಮುಕ್ತಿಮಾರ್ಗವು ತೋರುವುದು. ಬೇರೆ ದಾರಿಯೇ ಇಲ್ಲ" (ಕೃತಿಶ್ರೇಣಿ, ೨:೮೬).

## ವಿವೇಕಾನಂದರ ದೃಷ್ಟಿಯಲ್ಲಿ ಮಾಯೆ

ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಮಾಯೆಯು ಭ್ರಮೆಯಲ್ಲ, ಸಿದ್ಧಾಂತವೂ ಅಲ್ಲ; ಬದಲಿಗೆ ಪ್ರಪಂಚದಲ್ಲಿ ನಾವು ನೋಡಿ ಅನುಭವಪಡುವ ವಾಸ್ತವ. ಆದರೂ ಸ್ಪಷ್ಟ ಅಭಿವ್ಯಕ್ತಿಗೆ ಸಿಕ್ಕದಿರುವಂತಹ ವಿರೋಧಾಭಾಸಗಳನ್ನು ಒಳಗೊಂಡಿರುವಂಥದು. ಅವರ ಜ್ಞಾನಯೋಗದ ಮೇಲಣ ಉಪನ್ಯಾಸಗಳಲ್ಲಿ ಮೂರು ಮಾಯೆಗೇ ಮೀಸಲಾಗಿವೆ: 'ಮಾಯೆ ಮತ್ತು ಭ್ರಮೆ' 'ಮಾಯೆ ಮತ್ತು ಭಗವದ್ಭಾವನೆಯ ವಿಕಾಸ' ಹಾಗೂ 'ಮಾಯೆ ಮತ್ತು ಮುಕ್ತಿ'. ಮಾಯೆಯ ಪ್ರತಿಭಾಸ ಉಂಟುಮಾಡುವ ಅನೇಕ ಉದಾಹರಣೆಗಳನ್ನು ಅವರು ನಿತ್ಯಜೀವನದ ಅನುಭವಗಳಿಂದ ಆಯ್ದುಕೊಡುತ್ತಾರೆ. ಮಾಯೆಯ ಉಗಮವನ್ನು ಹುಡುಕುತ್ತ ಹೀಗೆನ್ನುತ್ತಾರೆ: "ಪುರಾತನ ವೈದಿಕ ಸಾಹಿತ್ಯದಲ್ಲಿ ಮಾಯೆ ಎಂಬ ಶಬ್ದವನ್ನು ಭ್ರಾಂತಿ ಎಂಬ ಅರ್ಥದಲ್ಲಿ ಬಳಸಿದ್ದಾರೆ... 'ಇಂದ್ರನು ಮಾಯೆಯ ಮೂಲಕ ಹಲವು ಆಕಾರಗಳನ್ನು ಧರಿಸಿದನು' ಎಂಬಂತಹ ಎಷ್ಟೋ ವಾಕ್ಯಗಳು ಬರುತ್ತವೆ... ಅನಂತರದ ಸಾಹಿತ್ಯದಲ್ಲಿ ಮಾಯೆ ಎಂಬ ಪದದ ಸುಳಿವೇ ಇಲ್ಲ. ಆದರೆ ಈ ಮಧ್ಯೆ ಅದರ ಭಾವನೆ ಮಾತ್ರ ಬೆಳೆಯುತ್ತಿತ್ತು. ಅನಂತರ 'ವಿಶ್ವದ ರಹಸ್ಯವನ್ನು ನಾವೇಕೆ ಗ್ರಹಿಸಲಾರೆವು?' ಎಂಬ ಪ್ರಶ್ನೆ ಎದ್ದಿತು. ಇದಕ್ಕೆ ಕೊಟ್ಟ ಉತ್ತರ ಬಹಳ ಮುಖ್ಯವಾಗಿತ್ತು. 'ಏಕೆಂದರೆ ನಾವು ಕೆಲಸಕ್ಕೆ ಬಾರದ ಮಾತಿನಲ್ಲಿ ಕಾಲಹರಣ ಮಾಡುವೆವು. ಕೇವಲ ಇಂದ್ರಿಯಕ್ಕೆ ಸಂಬಂಧಪಟ್ಟ ವಿಷಯದಲ್ಲೇ ನಮಗೆ ತೃಪ್ತಿ. ಆಸೆಗಳನ್ನೇ ನಾವು ಯಾವಾಗಲೂ ಹಿಂಬಾಲಿಸುತ್ತಿರುವೆವು. ಆದ ಕಾರಣವೇ ನಾವು ಸತ್ಯವನ್ನು ಮಂಜಿನಿಂದ ಮುಚ್ಚುವೆವು....' (ಮುಂದೆ) ಶ್ವೇತಾಶ್ವತರ ಉಪನಿಷತ್ತಿನಲ್ಲಿ 'ಪ್ರಕೃತಿಯೇ ಮಾಯೆ. ಅದನ್ನು ಆಳುವವನೇ ಈಶ್ವರ ಎಂದು ತಿಳಿ' ಎಂದು ಹೇಳಲಾಗಿದೆ ... ವೇದಾಂತದಲ್ಲಿ ಬರುವ ಪೂರ್ಣರೂಪವನ್ನು ಪಡೆದ ಮಾಯಾ ಭಾವನೆಯು ಭಾವಸತ್ತಾವಾದವೂ ಅಲ್ಲ, ವಸ್ತುಸತ್ತಾವಾದವೂ ಅಲ್ಲ, ಅದೊಂದು ಸಿದ್ಧಾಂತವೇ ಅಲ್ಲ. ಅದೊಂದು ವಾಸ್ತವ ಸ್ಥಿತಿಯ ನಿರೂಪಣೆ ಅಷ್ಟೆ. ನಾವೇನಾಗಿರುವೆವೋ, ಸುತ್ತಲೂ ಏನನ್ನು ನೋಡುತ್ತೇವೆಯೋ ಅದರ ನಿರೂಪಣೆ" (ಕೃತಿಶ್ರೇಣಿ, ೨:೩೦-೩೧). ಆದ್ದರಿಂದ ಮಾಯೆಯನ್ನು ವಿಧಾಯಕವಾಗಿ ಇಂಥದು ಒಂದು ಹೇಳಲು ಬರುವುದಿಲ್ಲ; ವಿವರಿಸಲಾಗದ್ದನ್ನು ವಿವರಿಸಲೆತ್ನಿಸುವ ಒಂದು ವ್ಯಾಖ್ಯಾನಸೂತ್ರ ಎನ್ನಬಹುದು. "ನಮ್ಮ ಇಡೀ ಬಾಳು ಅಸ್ತಿ ಮತ್ತು ಅದಕ್ಕೆ ವಿರೋಧವಾದ ನಾಸ್ತಿ ಇವುಗಳ ಮಿಶ್ರಣದಂತೆ ತೋರುತ್ತದೆ; ನಮ್ಮ ಜ್ಞಾನದಲ್ಲೇ ಈ ವಿರೋಧವಿದೆ. ಇಚ್ಛೆಪಟ್ಟರೆ ಮಾನವ ಎಲ್ಲವನ್ನೂ ಗ್ರಹಿಸಬಹುದು; ಆದರೆ ಸ್ವಲ್ಪದೂರ ಹೋಗುವುದರೊಳಗೆ ತಾನು ಭೇದಿಸಿ ಹೋಗಲಾರದ ವಜ್ರದ ಕೋಟೆ ಕಾಣುತ್ತದೆ. ಅವನ ಕೆಲಸವೆಲ್ಲ ಒಂದು ಪರಿಧಿಯೊಳಗೆ ಮಾತ್ರ. ಅದನ್ನು ಅವನು ಅತಿಕ್ರಮಿಸಿ ಹೋಗಲಾರ" (ಕೃತಿಶ್ರೇಣಿ, ೨:೩೩).

ಮನುಷ್ಯನಿಗೆ ಬುದ್ಧಿಯಿಂದ ಬಿಡಿಸಲಾಗದ ಸಮಸ್ಯೆಗಳು ಎದುರಾಗುತ್ತವೆ. ಪ್ರತಿಯೊಬ್ಬನಲ್ಲಿಯೂ ಸ್ವಾರ್ಥಿಯಾಗಿರಬೇಕೆಂಬ ಬಲವಾದ ಆಸೆ ಇರುತ್ತದೆಯಾದರೂ, ತಾನು ನಿಃಸ್ವಾರ್ಥತೆಯಿಂದಿರಬೇಕು, ಒಳ್ಳೆಯವನಾಗಬೇಕು ಎಂಬ ಭಾವನೆಯೂ ಇರುತ್ತದೆ. ಚಿಕ್ಕಂದಿನಲ್ಲಿದ್ದ ಅಪ್ರತಿಮ ಆಶಾವಾದ—ತನ್ನ ಸಾವನ್ನು ಕುರಿತು ಯೋಚಿಸಲಾಗಲಿ ಕಲ್ಪಿಸಿಕೊಳ್ಳಲಾಗಲಿ ಆಗದ ಕನಸಿನ ಪ್ರಪಂಚ—ವಯಸ್ಸಾಗುತ್ತಿದ್ದಂತೆ ನಿರಾಶೆಗೆ ತಿರುಗುತ್ತದೆ. ಸುಖಲೋಲುಪತೆಯಲ್ಲಿ ಓಲಾಡುವ ಹಣವಂತನ ಜೀವನಾಸಕ್ತಿಯೊಂದೆಡೆ; ತುತ್ತು ಕೂಳಿಗೆ ಗತಿಯಿಲ್ಲದ ಬಡವನ ಯಾತನೆಯೊಂದು ಕಡೆ—ಎಲ್ಲಕ್ಕೂ ಕೊನೆಗೆ ತೆರೆ ಎಳೆಯುವುದು ಸಾವು. "ಮರಣವೆಂಬ ಭೀಕರ ಸತ್ಯವೊಂದು ಬೇರೆ ಇದೆ. ಪ್ರಪಂಚವೆಲ್ಲ ಮೃತ್ಯುಮುಖವಾಗಿ ಸಾಗುತ್ತಿದೆ. ನಮ್ಮ ಅಭಿವೃದ್ಧಿ, ಪ್ರತಿಷ್ಠೆ, ವೈಭವ, ಐಶ್ವರ್ಯ, ಪಾಂಡಿತ್ಯ, ಸುಧಾರಣೆಗಳು ಎಲ್ಲಕ್ಕೂ ಮೃತ್ಯುವಿನ ಅಂತ್ಯ ಒಂದಿದೆ... ಜೀವನ, ಸೌಂದರ್ಯ, ಅಧಿಕಾರ, ಐಶ್ವರ್ಯ, ನಮ್ಮ ಸದ್ಗುಣಗಳು ಇವುಗಳ ಅಂತ್ಯವೂ ಕೂಡ ಮೃತ್ಯುವೇ... ಎಲ್ಲ ಮೃತ್ಯುಮುಖದೆಡೆಗೆ ಹೋಗುತ್ತಿರುವರು. ಆದರೂ ಜೀವನದ ಮೇಲೆ ಎಲ್ಲರಿಗೂ ಪ್ರಚಂಡ ಅಭಿಮಾನವಿದೆ. ಅಂತೂ, ಏಕೋ, ನಮಗೆ ಗೊತ್ತಿಲ್ಲ, ಜೀವನದಲ್ಲಿ ಆಸಕ್ತರಾಗಿರುವೆವು; ನಾವು ಅದನ್ನು ತ್ಯಜಿಸಲಾರೆವು; ಇದೇ ಮಾಯೆ." (ಕೃತಿಶ್ರೇಣಿ, ೨:೩೪).

ಮಾಯೆಯ ತಾತ್ತ್ವಿಕ ಪ್ರಾಮುಖ್ಯವನ್ನು ವಿವೇಕಾನಂದರು ವಿವರಿಸುವುದು ಹೀಗೆ: "ಯಾವುದನ್ನು ನೀವು ಭೌತದ್ರವ್ಯ, ಶಕ್ತಿ, ಮನಸ್ಸು ಇತ್ಯಾದಿಯಾಗಿ ಕರೆಯುತ್ತೀರೋ... ಅವು ಇದೆ ಅಥವಾ ಇಲ್ಲ ಎಂದು ಹೇಳಲಾರೆವು... ಇದು ಸತ್ಯ, ಆದರೂ ಅಸತ್ಯ; ಜಾಗೃತಿ, ಆದರೂ ನಿದ್ರೆ; ಇದೇ ಯಥಾರ್ಥ ಸ್ಥಿತಿ, ಇದನ್ನೇ

ಮಾಯೆ ಎನ್ನುವುದು. ನಾವು ಮಾಯೆಯಲ್ಲಿ ಹುಟ್ಟಿ, ಬೆಳೆದು, ಯೋಚಿಸುವೆವು, ಮಾಯೆಯಲ್ಲಿ ಕನಸು ಕಾಣುವೆವು. ನಾವು ಮಾಯೆಯಲ್ಲಿ ತತ್ತ್ವಜ್ಞರು, ಆಧ್ಯಾತ್ಮಿಕ ಜೀವಿಗಳು, ಮಾತ್ರವಲ್ಲ, ಮಾಯೆಯಲ್ಲೇ ದೈತ್ಯರು, ದೇವತೆಗಳು... ಮಾನವನ ಜ್ಞಾನವೆಲ್ಲ ಈ ಮಾಯೆಯ ಸಾಮಾನ್ಯೀಕರಣ... ಇವೆಲ್ಲ ನಾಮರೂಪಗಳ ಕೆಲಸ. ಆಕಾರವಿರುವ ಪ್ರತಿಯೊಂದೂ, ನಿಮ್ಮ ಮನಸ್ಸಿನಲ್ಲಿ ಭಾವನೆಯನ್ನು ತರುವ ಪ್ರತಿಯೊಂದೂ... ಕಾಲ ದೇಶ ಕಾರ್ಯಕಾರಣ ನಿಯಮಾವಳಿಗೆ ಬದ್ಧವಾಗಿರುವುದೆಲ್ಲವೂ ಮಾಯೆಯಲ್ಲಿದೆ" (ಕೃತಿಶ್ರೇಣಿ, ೨:೫೨).

ಪ್ರತಿಕ್ಷಣವೂ ಪ್ರಕೃತಿಯು ನಾವು ಸ್ವತಂತ್ರರಲ್ಲ, ಗುಲಾಮರು ಎಂದು ತೋರಿಸುತ್ತಿದೆ. ಆದರೂ ನಾವು ಸ್ವತಂತ್ರರೆಂಬ ಭಾವನೆ ಜೊತೆಯಲ್ಲಿಯೇ ಏಳುವುದು...

ಎಂದರೆ ಮಾಯೆಯೇ ವೇದಾಂತದ ಭರತವಾಕ್ಯವೇ? ಮಾಯೆಯನ್ನುಳಿದು ಬದುಕಿನಲ್ಲಿ ಬೇರೆ ಏನೂ ಇಲ್ಲವೇ? ಖಂಡಿತ ಅಲ್ಲ. ಅದು ಅದ್ವೈತದ ದೃಷ್ಟಿಯಲ್ಲವೇ ಅಲ್ಲ. ನಾವು ಮಾಯೆಯನ್ನು ಭೇದಿಸಿ ಹೊರಬರಬೇಕು; ಬಂದು ಪರಮಸತ್ಯವನ್ನು ಮನಗಾಣಬೇಕು. ವಿವೇಕಾನಂದರೆನ್ನುತ್ತಾರೆ : "ಈ ಮಾಯೆಯಿಂದ ಆಚೆ, ಮಾಯೆಯಿಂದ ಬದ್ಧವಾಗದ ಯಾವುದೋ ಒಂದು ಸತ್ಯವನ್ನು ವೇದಾಂತ ಚಿಂತಕರು ಕಂಡುಕೊಂಡರು. ಆ ಸ್ಥಿತಿಯನ್ನು ನಾವು ಮುಟ್ಟಿದರೆ ನಮಗೆ ಮಾಯೆಯ ಬಂಧನ ಇರುವುದಿಲ್ಲ... ಈ ವಿಶ್ವದ ಸೃಷ್ಟಿಗೆ ಮತ್ತು ಪಾಲನೆಗೆ ಕಾರಣನೆಂದು ಹೇಳುವ ಆ ಈಶ್ವರನೇ ಮಾಯೆಯ, ಪ್ರಕೃತಿಯ ಒಡೆಯ. ಈಶ್ವರ ಭಾವನೆಯು ವೇದಾಂತದ ಅಂತ್ಯವಲ್ಲ, ಪ್ರಾರಂಭ ಮಾತ್ರ. ಈ ಭಾವನೆಯು ವಿಕಾಸವಾಗುತ್ತ.... ಅವನೇ ಅಂತರ್ಯಾಮಿ ಎಂದು ವೇದಾಂತಿಯು ಅರ್ಥಮಾಡಿಕೊಳ್ಳುತ್ತಾನೆ. ಮೊದಲು ಉಪಾಧಿಗಳಿಂದ ಬದ್ಧನೆಂದು ಭಾವಿಸಿಕೊಂಡಿದ್ದವನು ಈಗ ತಾನು ಸ್ವತಂತ್ರ ಎಂಬುದನ್ನು ಅರಿಯುತ್ತಾನೆ" (ಕೃತಿಶ್ರೇಣಿ ೨:೪೪). ಉಪನಿಷತ್ತು ನಮ್ಮನ್ನು ಅಮೃತಪುತ್ರರು ಎನ್ನುತ್ತದೆ; ದಾರಿಗಾಣದ ಕತ್ತಲಲ್ಲೂ ದೂರದಲ್ಲೊಂದು ಮಿನುಗುದೀಪ ನಮ್ಮನ್ನು ಬಂಧಮುಕ್ತರಾಗಿ, ಸ್ವಾತಂತ್ರ್ಯದೆಡೆಗೆ ಬನ್ನಿ, ಎಂದು ಕರೆಯುತ್ತಿದೆ. ವಿವೇಕಾನಂದರೆನ್ನುತ್ತಾರೆ: "ಯಾರು ಸತ್ಯಕ್ಕಾಗಿ, ಧರ್ಮಕ್ಕಾಗಿ, ವಿಜಯಕ್ಕಾಗಿ ಛಲದಿಂದ ಹೋರಾಡಬಲ್ಲರೋ ಅವರು ಸರಿಯಾದ ಮಾರ್ಗದಲ್ಲಿರುವರು, ಇದನ್ನೇ ವೇದ ಸಾರುವುದು: 'ನಿರಾಶರಾಗಬೇಡಿ. ಹರಿದ ಕತ್ತಿಯ ಅಲುಗಿನ ಮೇಲೆ ನಡೆದಂತೆ ಮಾರ್ಗ ಕಠಿಣ. ಆದರೂ ನಿರಾಶರಾಗದಿರಿ. ಏಳಿ, ಜಾಗ್ರತರಾಗಿ. ಆದರ್ಶವನ್ನು, ಗುರಿಯನ್ನು ಕಾಣಿರಿ'" (ಕೃತಿಶ್ರೇಣಿ, ೨:೬೪).

ಹೇಗೇ ಇರಲಿ, ಮಾನವನ ಹೃದಯದಲ್ಲಿ ಸ್ವಾತಂತ್ರ್ಯದ ಬಗ್ಗೆ ತಹತಹ ಇದ್ದೇ ಇದೆ. ಅವನ ಹೃದಯಾಂತರಾಳದಲ್ಲಿ ಮಾಯಾ ಬಂಧನದಿಂದ ತಪ್ಪಿಸಿಕೊಳ್ಳಬೇಕೆಂಬ ತೀವ್ರಾಭಿಲಾಷೆ ಇದೆ. ತಾನು ಮುಟ್ಟಬೇಕೆಂದಿರುವ ದಿವ್ಯತೆಯ ಗುರಿ ಅವನ ಆಳಮನಸ್ಸಿನಲ್ಲಿ ಇದ್ದೇ ಇದೆ. ಇದನ್ನು ಕುರಿತು ವಿವೇಕಾನಂದರು ಹೀಗೆನ್ನುತ್ತಾರೆ: "ನಮ್ಮ ಸುಖದುಃಖ, ಹೋರಾಟ, ತೊಂದರೆಗಳು—ಇವುಗಳ ಮಧ್ಯದಲ್ಲಿಯೂ ನಾವೆಲ್ಲ ನಿಜವಾಗಿ ಸ್ವಾತಂತ್ರ್ಯದೆಡೆಗೆ ಪ್ರಯಾಣ ಮಾಡುತ್ತಿರುವುದು ಒಂದು ವಿಚಿತ್ರವಾದ ವಿಷಯವೇ.... ನೀವು ಈ ಸ್ವಾತಂತ್ರ್ಯದ ಭಾವನೆಯನ್ನು ತ್ಯಜಿಸಲಾರಿರಿ. ಇದಿಲ್ಲದೆ ನಿಮ್ಮ ಜೀವನ-ಕ್ರಿಯೆ ಯಾವುದೂ ಇರುವುದಿಲ್ಲ. ಪ್ರತಿಕ್ಷಣವೂ ಪ್ರಕೃತಿಯು ನಾವು ಸ್ವತಂತ್ರರಲ್ಲ, ಗುಲಾಮರು ಎಂದು ತೋರಿಸುತ್ತಿದೆ. ಆದರೂ ನಾವು ಸ್ವತಂತ್ರರೆಂಬ ಭಾವನೆ ಜೊತೆಯಲ್ಲಿಯೇ ಏಳುವುದು... ಯಾವುದೋ ಅಂತರ್ವಾಣಿ ನಾವು ಸ್ವತಂತ್ರರು ಎಂದು ಉಸುರುವುದು" (ಕೃತಿಶ್ರೇಣಿ, ೨:೬೪-೬೫). ನಮ್ಮಲ್ಲಿ ಸ್ವಾತಂತ್ರ್ಯದ ಅನಿಸಿಕೆ ಇದ್ದೇ ಇದೆಯಾದರೂ ಅದಕ್ಕೆ ನಾವು ಕೊಡುವ ನಿರ್ದೇಶನ, ದಿಕ್ಕು ಬದಲಾಗಬೇಕು. ಸ್ವಾತಂತ್ರ್ಯವನ್ನು ಹೊರಗೆ ಅರಸುವ ಬದಲು ಒಳಗೆ ಅನ್ವೇಷಿಸಬೇಕು. ಅದು ನಮ್ಮ ಆತ್ಮದ ಆತ್ಮ. ಆ ಸ್ವಾತಂತ್ರ್ಯವೇ ನಮ್ಮ ಸ್ವಭಾವ. ಈ ಮಾಯೆ ಎಂದಿಗೂ ನಮ್ಮನ್ನು ಬಂಧಿಸಿರಲಿಲ್ಲ.

ಮೇಲೆ ಕಾಣಿಸಿದ ಸ್ವಾಮೀಜಿಯವರ ಉಕ್ತಿಗಳಿಂದ ಅವರು ಮಾಯೆಯ ಕಲ್ಪನೆಯನ್ನು ಅತ್ಯಂತ ಸ್ಪಷ್ಟವಾಗಿ ವಿವರಿಸಿರುವರು ಎಂದು ತಿಳಿಯುವುದು. ಯಾವುದೇ ಕ್ಲಿಷ್ಟ ತಾಂತ್ರಿಕ ಪದಗಳಿಲ್ಲದ, ಜಗ್ಗಾಟವಿಲ್ಲದ ಸರಳ ವಿವರಣೆ ಅದು. ವಿವೇಕಾನಂದರ ಅದ್ಭುತವೆನಿಸುವಂಥ ಸರಳ ಭಾಷೆಯು ಸಾಮಾನ್ಯರಿಗೂ ಅರ್ಥವಾಗುವಂಥದು. ಕೆಲಸ ಮಾಡುವುದೆಂದರೆ ತಮ್ಮ ಸ್ವಾತಂತ್ರ್ಯಕ್ಕೆ ವಿರೋಧವಾದುದೆಂದು ಭಾವಿಸುವವರೆಷ್ಟೋ ಮಂದಿ ನಮ್ಮಲ್ಲಿದ್ದಾರೆ. ಕಾಯಕವೆಂಬುದು ವಾಸ್ತವಿಕ ಮಟ್ಟದಲ್ಲಿರುವುದರಿಂದ ಅದು ಆತ್ಮದ ಸ್ವಾತಂತ್ರ್ಯಕ್ಕೊಂದು ಅಡ್ಡಿ ಎಂದು ಅವರ ಅನಿಸಿಕೆ. ಆದರೆ, ಸಂತೋಷವೆಂಬುದು ನ್ಯಾಯದ ರೂಪದಲ್ಲಿ ಹೇಗೆ ಅಭಿವ್ಯಕ್ತವಾಗುವುದೋ ಹಾಗೆಯೇ ಆತ್ಮವು ಕ್ರಿಯೆಯಲ್ಲಿಯೇ ತನ್ನ ಸ್ವಾತಂತ್ರ್ಯವನ್ನು ಕಂಡುಕೊಳ್ಳುವುದು. ಆತ್ಮದ ಸಾಕ್ಷಾತ್ಕಾರವನ್ನು ಪಡೆದವರಾರೂ ಕರ್ಮವು ಒಂದು ಬಂಧನ, ಜೀವನವು ದುಃಖಮಯ ಇತ್ಯಾದಿ ಗೋಳುಗರೆಯುವ ಮಾತನ್ನಾಡುವುದಿಲ್ಲ. ಅಂಥವರಿಗೆ ಲೋಕದಲ್ಲಿನ ಬದುಕು ಭ್ರಮೆಯಲ್ಲ, ಬಿಸಿಲುಗುದುರೆಯಲ್ಲ, ಮಾಯೆಯೂ ಅಲ್ಲ.

ನಮ್ಮ ಸ್ವರ್ಗಸಂತೋಷದ ಕಲ್ಪನೆಯನ್ನು ನಾವು ಮಾನವ ಜೀವನದ ಸಿರಿವಂತಿಕೆಯಲ್ಲಿ, ಮಾನವ ಮುಖದ ಸೌಂದರ್ಯದಲ್ಲಿ, ಭೂಮಂಡಲವನ್ನು ಮುಚ್ಚಿರುವ ಹಸಿರು ಹಾಸಿನಲ್ಲಿ, ಸೂರ್ಯೋದಯದ ಹೊಂಗಿರಣದಲ್ಲಿ, ಆಪ್ಯಾಯಮಾನವಾಗಿ ಸುಯ್ಯುವ ಸಮೀರಣನಲ್ಲಿ, ಝಲ್ಲಕವೆಂದೆನಿಸುವ ಹಕ್ಕಿಯ ಹಾಡಿನಂತಹ ಅತಿ ಸಣ್ಣ ಸಂಗತಿಯಲ್ಲಿ ಸಹ ಕಾಣಬಹುದು. ಈ ಭೂಮಿಯ ಮೇಲೆ ಎಲ್ಲೆಲ್ಲೂ ಸ್ವರ್ಗದ ಭಾವನೆ ಎಚ್ಚೆತ್ತಿದೆ; ತನ್ನ ನಲಿವಿನ ಗೀತೆಯನ್ನು ಹಾಡುತ್ತಿದೆ; ನಮಗರಿಯದಂತೆಯೇ ನಮ್ಮ ಕಿವಿಗದು ಬೀಳುತ್ತಿದೆ. ಕವಿ ಹೃದಯದ ಮನುಷ್ಯನ ದೃಷ್ಟಿಯಲ್ಲಿ ಪ್ರಪಂಚದ ವಾಸ್ತವತೆಗೂ ಆಧ್ಯಾತ್ಮಿಕ ಸತ್ಯಕ್ಕೂ ನಡುವೆ ಯಾವ ವೈಮನಸ್ಯವೂ ಇರದು, ಎಂದೆಂದಿಗೂ ಬಾರದು.